ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ

ದಿನಾಂಕ : DATE : 18/06/2019

# ರಾಜ್ಯದ 27 ಸಂಸದರಿಂದ ಪ್ರಮಾಣವಚನ

ಕ.ಪ್ರ 18/6/19

## ಸಂಸ್ಕೃತದಲ್ಲಿ ಅನಂತ್, ಇಂಗ್ಲಿಷಲ್ಲಿ ಅಂಗಡಿ, ಇತರರು ಕನ್ನಡದಲ್ಲಿ ಪ್ರಮಾಣ | ಪ್ರಜ್ವಲ್ ಗೈರು








**ನವದೆಹಲಿ:** ಲೋಕಸಭೆಗೆ ಕರ್ನಾಟಕದಿಂದ ಆಯ್ಕೆಯಾಗಿರುವ 28 ಸಂಸದರ ಪೈಕಿ 27 ಸಂಸದರು, 17ನೇ ಲೋಕಸಭೆಯ ಮೊದಲ ಅಧಿವೇಶನದ ಮೊದಲ ದಿನವಾದ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಹಾಸನ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ಮಾತ್ರ ಸೋಮವಾರ ಗೈರಾಗಿದ್ದಾರೆ. 27 ಸಂಸದರ ಪೈಕಿ ಉತ್ತರ ಕನ್ನಡ ಕ್ಷೇತ್ರದ ಸಂಸದ ಅನಂತ್‌ಕುಮಾರ್ ಹೆಗಡೆ ಸಂಸ್ಕೃತದಲ್ಲಿ ಮತ್ತು ಬೆಳಗಾವಿ ಕ್ಷೇತ್ರದ ಸಂಸದ ಸುರೇಶ್ ಅಂಗಡಿ ಅವರು ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಉಳಿದೆಲ್ಲಾ ಕರ್ನಾಟಕದ 25 ಸಂಸದರು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿದರು. ತುಮಕೂರು ಕ್ಷೇತ್ರದ ಜಿ.ಎಸ್. ಬಸವರಾಜು ಅವರು ಸಿದ್ಧಗಂಗಾಮಠದ ಸಿದ್ಧಗಂಗಾ ಸ್ವಾಮಿಗಳ ಹೆಸರಲ್ಲಿ ಮತ್ತು ಚಾಮರಾಜನಗರ ಕ್ಷೇತ್ರದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ಜನರ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.



## ಸಾಂಪ್ರದಾಯಿಕ ಉಡುಗೆಯಲ್ಲಿ ಪ್ರತಾಪ್‌ಸಿಂಹ, ತೇಜಸ್ವಿ ಮಿಂಚು

ನವದೆಹಲಿ: ಮೈಸೂರು- ಕೊಡಗು ಕ್ಷೇತ್ರದ ಸಂಸದ ಪ್ರತಾಪ್‌ಸಿಂಹ, 17ನೇ ಲೋಕಸಭೆಯ ಮೊದಲ ದಿನದ ಕಲಾಪಕ್ಕೆ ಕೊಡಗಿನ ಸಾಂಪ್ರದಾಯಿಕ ಕೊಡವ ಉಡುಗೆ ತೊಟ್ಟು ಆಗಮಿಸಿ ಗಮನ ಸೆಳೆದರು. ಇನ್ನು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಇದೇ ಮೊದಲ ಬಾರಿಗೆ ಲೋಕಸಭೆ ಮೆಟ್ಟಿಲೇರಿರುವ ತೇಜಸ್ವಿ ಸೂರ್ಯ, ಮೈಸೂರು ಶೈಲಿಯ ಪಂಚೆ, ಶಲ್ಯ ಧರಿಸಿ ಆಗಮಿಸಿದ್ದರು.